# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 108 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಎಲೆಕ್ಟ್ರಿಕಲ್ ವಾಹನಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ವಿದ್ಯುತ್ ಚಾಲಿತ ವಾಹನಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಕ್ರಮ ಹಾಗೂ ವಿದ್ಯುತ್ ಚಾಲಿತ ವಾಹನಗಳನ್ನು ಖರೀದಿಸಿದ ಗ್ರಾಹಕನಿಗೆ ದೊರೆಯುವ ಲಾಭಗಳ ವಿವರಗಳು ಈ ಕೆಳಗಿನಂತಿವೆ:-<br><br>1. ವಿದ್ಯುತ್ ವಾಹನಗಳಿಗೆ ಅಗತ್ಯವಿರುವ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಕೇಂದ್ರ ಸರ್ಕಾರ ನೀಡಿರುವ ಮಾನದಂಡದ (ಸಂಖ್ಯೆ: 12/2/2018-EV ದಿನಾಂಕ:01.10.2019) ಅನ್ವಯ ಯಾವುದೇ ಪರವಾನಿಗೆ ಅಗತ್ಯವಿಲ್ಲದೆ ಸ್ಥಾಪಿಸಬಹುದಾಗಿದೆ.<br>2. ವಾಹನ ಚಾರ್ಜಿಂಗ್ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕವನ್ನು ಆದ್ಯತೆ ಮೇರೆಗೆ ಒದಗಿಸಲಾಗುವುದು.<br>3. ರಸ್ತೆ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ.<br>4. ಜಿ.ಎಸ್.ಟಿ. ತೆರಿಗೆಯನ್ನು ಶೇ.12% ರಿಂದ 5%. ಕ್ಕೆ ಕಡಿತಗೊಳಿಸಲಾಗಿದೆ.<br>5. ವಿದ್ಯುತ್ ಚಾಲಿತ ವಾಹನ ಸಾಲದ ಬಡ್ಡಿಯಲ್ಲಿ ಆದಾಯ ತೆರಿಗೆ ರಿಯಾಯಿತಿಯನ್ನು ನೀಡಲಾಗಿದೆ.<br>6. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಎಲೆಕ್ಟ್ರಿಕ್ ವಾಹನಗಳಿಗೆ ಚಾರ್ಜಿಂಗ್ ಮಾಡಲು ತಗಲುವ ವಿದ್ಯುತ್ ಬಳಕೆ ಶುಲ್ಕವನ್ನು ಪ್ರತಿ ಯೂನಿಟ್‌ಗೆ ರೂ.5/- ರಂತೆ ನಿಗದಿಪಡಿಸಿರುತ್ತದೆ.<br>7. ಎಲೆಕ್ಟ್ರಿಕ್ ವಾಹನದ ಚಾಲನೆಯ ವೆಚ್ಚವು ಪೆಟ್ರೋಲ್ ಅಥವಾ ಡೀಸೆಲ್ ವಾಹನಕ್ಕಿಂತ ಕಡಿಮೆಯಾಗಿದೆ.<br>8. ಎಲೆಕ್ಟ್ರಿಕ್ ವಾಹನಗಳು ಕಡಿಮೆ ನಿರ್ವಹಣಾ ವೆಚ್ಚವನ್ನು ಹೊಂದಿವೆ.<br>9. ಶೂನ್ಯ ಹೊಗೆ ಹೊರಸೂಸುವಿಕೆ ಇರುವದರಿಂದ, ಎಲೆಕ್ಟ್ರಿಕ್ ವಾಹನಗಳ ಚಾಲನೆಯಿಂದ ಇಂಗಾಲದ ಹೆಜ್ಜೆಗುರುತನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.<br>10. ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಲು ನೋಂದಣಿ ಶುಲ್ಕ ಮತ್ತು ರಸ್ತೆ ತೆರಿಗೆ ಪೆಟ್ರೋಲ್ ಅಥವಾ ಡೀಸೆಲ್ ವಾಹನಗಳಿಗಿಂತ ಕಡಿಮೆ ಇರುತ್ತದೆ. |
| ಆ) | ಸದರಿ ವಾಹನಗಳನ್ನು ಖರೀದಿಸಿದರೆ ಗ್ರಾಹಕನಿಗೆ ದೊರೆಯುವ ಲಾಭವೇನು; | |

....2

| | | |
|---|---|---|
| ಇ) | ಸದರಿ ವಾಹನಗಳನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಕೈಗೊಂಡ ಕ್ರಮವೇನು; (ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು) | ವಿದ್ಯುತ್ ವಾಹನಗಳನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಕೈಗೊಂಡ ಕ್ರಮಗಳ ವಿವರಗಳು ಈ ಕೆಳಗಿನಂತಿವೆ:<br>1. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ದಿನಪತ್ರಿಕೆಗಳು, ಆಕಾಶವಾಣಿ, ಸಾಮಾಜಿಕ ಜಾಲತಾಣಗಳು, ವಿದ್ಯುತ್ ಸರಬರಾಜು ಕಂಪನಿಗಳ ವೆಬ್ ಸೈಟ್ ಮುಂತಾದವುಗಳಲ್ಲಿ ವಿದ್ಯುತ್ ವಾಹನಗಳಿಂದಾಗುವ ಸದುಪಯೋಗಗಳ ಬಗ್ಗೆ ಮಾಹಿತಿಯನ್ನು ಪ್ರಕಟಿಸಲಾಗಿದೆ.<br>2. ಸಾರ್ವಜನಿಕರಲ್ಲಿ ವಿದ್ಯುತ್ ವಾಹನಗಳ ಬಗ್ಗೆ ಅರಿವು ಮೂಡಿಸಲು ದಿನಾಂಕ 01.07.2022 ರಿಂದ 03.07.2022ರ ವರೆಗೆ ಬೆಂಗಳೂರು ನಗರದಲ್ಲಿ ಇವಿ ಅಭಿಯಾನ ಅಂಗವಾಗಿ 'ಇವಿ ಎಕ್ಸ್ಪೋ' ಏರ್ಪಡಿಸಲಾಗಿತ್ತು ಹಾಗೂ 30,000ಕ್ಕೂ ಹೆಚ್ಚು ಸಾರ್ವಜನಿಕರು ಪಾಲ್ಗೊಂಡಿದ್ದರು. |
| ಈ) | ಎಲೆಕ್ಟ್ರಿಕಲ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ಹಾಗೂ ಈಗಿರುವ ಒಟ್ಟು ಚಾರ್ಜಿಂಗ್ ಸ್ಟೇಷನ್‌ಗಳು ಎಷ್ಟು ಮತ್ತು ಇನ್ನು ಎಷ್ಟು ಚಾರ್ಜಿಂಗ್ ಸ್ಟೇಷನ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ? (ಕಾಲಮಿತಿಯೊಂದಿಗೆ ವಿವರ ಒದಗಿಸುವುದು) | ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಗಿನಂತಿವೆ:<br>1. ಈಗಾಗಲೇ, ಬೆವಿಕಂಪನಿ ವತಿಯಿಂದ 04 ಕೇಂದ್ರಗಳಲ್ಲಿ 10 ಚಾರ್ಜಿಂಗ್ ಪಾಯಿಂಟ್‌ಗಳನ್ನು 2018 ರಲ್ಲಿ ಸ್ಥಾಪಿಸಲಾಗಿದೆ.<br>2. ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯಿಂದ ಬೆಂಗಳೂರು ನಗರದಲ್ಲಿ ರೂ. 4 ಕೋಟಿ ಅನುದಾನದಲ್ಲಿ 70 ಕೇಂದ್ರಗಳಲ್ಲಿ 126 ಚಾರ್ಜಿಂಗ್ ಪಾಯಿಂಟ್‌ಗಳನ್ನು 2019ರಲ್ಲಿ ಸ್ಥಾಪಿಸಲಾಗಿದೆ.<br>3. ಮುಂದುವರೆದು, ಬೆಸ್ಕಾಂ ವತಿಯಿಂದ ಬೆಂಗಳೂರು ನಗರ ಸೇರಿದಂತೆ ಬೆಸ್ಕಾಂ ವ್ಯಾಪ್ತಿಯ ಇತರೆ 7 ಜಿಲ್ಲೆಗಳಲ್ಲಿ 184 ಚಾರ್ಜಿಂಗ್ ಪಾಯಿಂಟ್‌ಗಳನ್ನು ಜೂನ್ 2022ರ ಅಂತ್ಯಕ್ಕೆ ಸ್ಥಾಪಿಸಲಾಗಿದೆ.<br>4. ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ನಗರವನ್ನು ಹೊರತುಪಡಿಸಿ ಇತರೆ 7 ಜಿಲ್ಲೆಗಳಲ್ಲಿ 53 ಸ್ಥಳಗಳಲ್ಲಿ 140 ಚಾರ್ಜಿಂಗ್ ಉಪಕರಣಗಳನ್ನು ಮಾರ್ಚ್-2023ರ ಒಳಗೆ ಸ್ಥಾಪಿಸಲಾಗುವುದು.<br>5. ರಾಜ್ಯಾದ್ಯಂತ RTO ಆವರಣದಲ್ಲಿ 26 EV (Electric Vehicle) ಚಾರ್ಜಿಂಗ್ ಸ್ಟೇಷನ್‌ಗಳನ್ನು ಮತ್ತು ಬೆಂಗಳೂರು ನಗರದಲ್ಲಿ ಬೆಸ್ಕಾಂ ಚಾರ್ಜಿಂಗ್ ಸ್ಟೇಷನ್‌ಗಳಲ್ಲಿ ಅಧಿಕವಾಗಿ 10 ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸುವುದಕ್ಕೆ ಸಾರಿಗೆ ಇಲಾಖೆಯಿಂದ 2022 ರಲ್ಲಿ ರೂ.3.00 ಕೋಟಿ ಬಿಡುಗಡೆ ಮಾಡಿದೆ. ಬೆಸ್ಕಾಂ ವತಿಯಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯು ಜೂನ್-2023 ರ ಒಳಗೆ ಪೂರ್ಣಗೊಳಿಸಲಾಗುವುದು. |

| | | | |
|---|---|---|---|
| | | | 6. ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆಗಳ ಇಲಾಖೆಯು, FAME-II (Faster Adoption and Manufacturing of Hybrid and Electric Vehicle scheme) ಯೋಜನೆಯಡಿ ರಾಜ್ಯಕ್ಕೆ 172 ಇವುಗಳ ಪೈಕಿ ಬೆಂಗಳೂರು ನಗರಕ್ಕೆ 152, ಮಂಗಳೂರು ನಗರಕ್ಕೆ 10 ಹಾಗೂ ಕಲಬುರ್ಗಿ ನಗರಕ್ಕೆ 10 ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಮಾರ್ಚ್-2023ರ ಒಳಗೆ ಸ್ಥಾಪಿಸಲು ಅನುಮೋದನೆ ನೀಡಿದೆ.<br>7. ಕರ್ನಾಟಕ ಸರ್ಕಾರವು 2021 ರ ಬಜೆಟ್ ನಲ್ಲಿ PPP (Public Private Partnership model) ಆಧಾರದ ಮೇಲೆ ರಾಜ್ಯದಲ್ಲಿ 1000 ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಬೆಸ್ಕಾಂನ್ನು ರಾಜ್ಯದಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳ ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸಲು ನೋಡಲ್ ಏಜೆನ್ಸಿಯನ್ನಾಗಿ ನೇಮಿಸಲಾಗಿದ್ದು, ಮಾರ್ಚ್-2023ರ ಒಳಗೆ 1190 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಬೆಸ್ಕಾಂವತಿಯಿಂದ ಟೆಂಡರ್ ಆಹ್ವಾನಿಸಲಾಗಿದೆ. |

ಸಂಖ್ಯೆ: ಎನರ್ಜಿ 183 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು